**ಅನೇಕ ಬಾರಿ ಸಾರ್ತ್ರ್ ತಮ್ಮ ವಿಚಾರಗಳ ವಿರುದ್ಧ ದಿಕ್ಕಿನಲ್ಲೂ ಯೋಚಿಸುತ್ತಿದ್ದರು. ಕಾರಣವಿಷ್ಟೆ: ಸತ್ಯದ ಎಲ್ಲ ಮುಖಗಳು ನಿಖರವಾಗಿ ಗೋಚರವಾಗಲಿ ಎಂಬುದು. ವಿರುದ್ಧ ದಿಕ್ಕುಗಳಲ್ಲಿ ಯೋಚಿಸಿ ನಿರ್ಣಯಕ್ಕೆ ಬರುವುದು ಸಾರ್ತ್ರ್‌ರ ಚಿಂತನಾಕ್ರಮವಾಗಿತ್ತು.**

ನಾನು ಮತ್ತು ಸಿಲ್ವಿಯಾ ರಜೆಯಲ್ಲಿ ಬೊಲಾಯಿಲೆಗೆ ಹೊರಡುವುದೆಂದು ತೀರ್ಮಾನಿಸಿದ್ದೆವು. ಈ ಕುರಿತು ಅವರು ಪದೇ ಪದೇ ವಿಚಾರಿಸುತ್ತಿದ್ದರು. ಜೊತೆಗೆ ತಮ್ಮ ಆರೋಗ್ಯದ ಬಗ್ಗೆ ಎಚ್ಚರದಿಂದಲೂ ಇದ್ದರು. ಪೈಪ್ ಸೇವನೆ ಬಿಟ್ಟಿದ್ದರು. ಕುಡಿಯುವುದನ್ನು ಕಡಿಮೆ ಮಾಡಿದ್ದರು. ಕುಡಿಯುವ ಪ್ರಮಾಣ ಮತ್ತು ಗತಿಯಲ್ಲಿ ಬದಲಾವಣೆಯಾಗಿದ್ದವು. ಇತ್ತೀಚೆಗೆ ಹೊರಗಡೆ ಊಟಕ್ಕೆ ಹೋದಾಗ ಅರ್ಧಂಬರ್ಧ ಕುಡಿದು ಹಾಗೇ ಎದ್ದು ಹೊರಡುತ್ತಿದ್ದರು. ಮೊದಲೆಲ್ಲ ತರಿಸಿದ ಬಾಟಲಿ ಪೂರ್ಣ ಖಾಲಿಯಾಗುತ್ತಿತ್ತು.

ಮಾರ್ಚ್ ತಿಂಗಳ ಒಂದು ದಿನ ಆರಲೆಟ್ಟೆಯು ಸಾರ್ತ್ರ್ ಬೆಡ್‌ರೂಮಿನಲ್ಲಿ ಬಿದ್ದಿರುವುದನ್ನು ಗಮನಿಸಿದಳು. ತುಂಬಾ ಕುಡಿದಿದ್ದರು. ಆ ರಾತ್ರಿ ಅವರು ಅನೇಕ ತರುಣಿಯರೊಂದಿಗೆ ಪಾರ್ಟಿ ಮಾಡಿದಂತಿತ್ತು. ಆ ತರುಣಿಯರಿಗೆ ಸಾರ್ತ್ರೆಯ ಆರೋಗ್ಯದ ಗಂಭೀರತೆ ತಿಳಿದಿರಲಿಲ್ಲ. ಅವರೆಲ್ಲ ಸಾರ್ತ್ರ್‌ರಿಗೆ ಇಷ್ಟವಾಗಿದ್ದ ವ್ಹಿಸ್ಕಿ ಮತ್ತು ವೋಡ್ಕಾ ಬಾಟಲಿಗಳನ್ನು ಹಿಡಿದು ಬರುತ್ತಿದ್ದರು. ತಡರಾತ್ರಿಯವರೆಗೆ ಹರಟೆ ತೆರಳುತ್ತಿದ್ದರು. ಸಾರ್ತ್ರ್ ಎಂದರೆ ಅವರಿಗೆಲ್ಲ ಪ್ರೀತಿ ಮತ್ತು ಗೌರವ. ಸಾರ್ತ್ರ್ ನನಗೆ ಗೊತ್ತಿಲ್ಲದಂತೆ ಆ ಎಲ್ಲಾ ಬಾಟಲಿಗಳನ್ನು ಮಂಚದ ಕೆಳಗೆ ಬಚ್ಚಿಡುತ್ತಿದ್ದರು. ಬೆಳಗ್ಗೆ ಎದ್ದ ತಕ್ಷಣ ಅವರು ಬಚ್ಚಿಟ್ಟಿದ್ದ ಮದ್ಯವನ್ನೆಲ್ಲ ಹುಡುಕಿ ಆಚೆ ಒಯ್ಯುವುದೇ ದೊಡ್ಡ ಕೆಲಸವಾಯಿತು. ಆಮೇಲೆ ಆ ತರುಣಿಯರಿಗೆ ಫೋನ್ ಮಾಡಿ ಎಚ್ಚರಿಕೆ ಕೊಟ್ಟೆ. ಸಾರ್ತ್ರ್‌ರನ್ನೂ ತರಾಟೆಗೆ ತೆಗೆದುಕೊಂಡೆ. ಅವರ ಅನಾರೋಗ್ಯ ನನಗೆ ಸಂಕಟ ತಂದಿತ್ತು. ಮದ್ಯಸೇವನೆ ಕಡಿಮೆ ಮಾಡಿದ್ದ ಸಾರ್ತ್ರ್ ಈ ತರುಣಿಯರ ಸಂಗದಲ್ಲಿ ಮೈಮರೆತಿದ್ದರು. ನನ್ನ ಸಿಟ್ಟನ್ನು ಹಗುರವಾಗಿ ತೆಗೆದುಕೊಂಡು ನನ್ನನ್ನೇ ಛೇಡಿಸಿದರು: 'ನೀನು ಕುಡಿಯುವ ಪ್ರಮಾಣವೇನೂ ಕಡಿಮೆಯಿಲ್ಲ.' ಅವರಿಗೆ ತಮ್ಮ ಅನಾರೋಗ್ಯದ ಬಗ್ಗೆ ಆತಂಕವಿತ್ತೇ ಹೊರತು ಎಚ್ಚರವಿರಲಿಲ್ಲ.

ಆಕಡೆ 'ಲಾ ನಾವೆಲ್ ಅಬ್ಸರ್ವೇಟರ್'ನಲ್ಲಿ ಪ್ರಕಟಕೊಳ್ಳುತ್ತಿರುವ ಕೃತಿಯ ಸಹಸಂಪಾದಕ ವಿಕ್ಟರ್ ಜೊತೆಗಿನ ಮಾತುಕತೆಯಲ್ಲಿ ಅವರಿಗೆ ಅಂಥ ನೆಮ್ಮದಿ ಇರಲಿಲ್ಲ. ಈ ಮಾತುಕತೆ ಪ್ರಕಟವಾಗುವ ಪೂರ್ವದಲ್ಲಿ ನಾನೂ ಓದಿದ್ದೆ. ನನಗೆ ನಿರಾಶೆಯಾಗಿತ್ತು. ವಿಕ್ಟರ್ ಅನಗತ್ಯ ವಿಷಯಗಳನ್ನು ಪ್ರಸ್ತಾಪಿಸಿದ್ದ. ತನ್ನ ಶ್ರೇಷ್ಠತೆಯನ್ನು ಬಿಂಬಿಸಲು ಹಾತೊರೆದಿದ್ದ. ಸಾರ್ತ್ರ್‌ರ ಅನೇಕ ಗೆಳೆಯರಿಗೂ ಈ ಪ್ರಕಟಣೆ ಅಚ್ಚರಿ ಉಂಟುಮಾಡಿತ್ತು. ಅವರ ಹೇಳಿಕೆಗಳನ್ನು ಬೇಕಂತಲೇ ದುರ್ಬಲಗೊಳಿಸಲಾಗಿತ್ತು. ಬೇರೆ ಮಾವೋವಾದಿಗಳಂತೆ ವಿಕ್ಟರ್ ಈಗ ಆಸ್ತಿಕನಾಗಿ ಪರಿವರ್ತನೆಗೊಂಡಿದ್ದ. ಯಹೂದಿ ಆಗಿದ್ದರಿಂದ ಅವನ ದೇವರು ಇಸ್ರೇಲ್‌ನವರೆ ಆಗಿದ್ದರು. ಅವನ ಲೋಕತಿಳಿವಳಿಕೆಯಲ್ಲಿ ಅತಿಯಾದ ಆಧ್ಯಾತ್ಮಿಕತೆ ಮತ್ತು ಧಾರ್ಮಿಕತೆ ನುಸುಳಿತ್ತು. ಅವನ ಇಂಥ ನಡವಳಿಕೆಯಿಂದ ಸಾರ್ತ್ರ್ ತುಂಬಾ ಕಿರಿಕಿರಿ ಅನುಭವಿಸಿದ್ದರು. ನನ್ನೊಡನೆ ಮಾತನಾಡುತ್ತ ವಿಕ್ಟರ್‌ನ ವಂಚನೆಯನ್ನು ತಿಳಿಸಿದರು. ಆತ